**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಎರಡನೇ ಅಧಿವೇಶನ**

# ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–32)**

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, 2023

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ನ್ನು (2001ರ ಕರ್ನಾಟಕ ಅಧಿನಿಯಮ 33) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.- (1) ಈ ಅಧಿನಿಯಮವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು, 1ನೇ ಮೇ, 2003ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 78ನೇ ಪ್ರಕರಣದ ತಿದ್ದುಪಡಿ**.- ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ 33)ರ 78ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿನ (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(ಡಿ) ಬಾಂಬೆ ಸಾರ್ವಜನಿಕ ನ್ಯಾಸ ಅಧಿನಿಯಮ, 1950 (1950ರ ಬಾಂಬೆ ಅಧಿನಿಯಮ ಸಂ.XXIX);" ಮತ್ತು

(ii) (2)ನೇ ಉಪಪ್ರಕರಣದಲ್ಲಿನ (ಎ) ಖಂಡವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಬಾಂಬೆ ಸಾರ್ವಜನಿಕ ನ್ಯಾಸ ಅಧಿನಿಯಮ, 1950 (1950ರ ಬಾಂಬೆ ಅಧಿನಿಯಮ ಸಂ.XXIX)ನ್ನು ಸಾರ್ವಜನಿಕ ನ್ಯಾಸಗಳಿಗೆ ಅನ್ವಯಿಸುವಲ್ಲಿ ಅದರ ಉಪಬಂಧಗಳನ್ನು ಪುನರುಜ್ಜೀವನಗೊಳಿಸಲು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ 33)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ರಾಮಲಿಂಗಾ ರೆಡ್ಡಿ**
ಸಾರಿಗೆ ಮತ್ತು ಮುಜರಾಯಿ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಉದ್ಧೃತ ಭಾಗ

**XX XX XX**

**78. ನಿರಸನ ಮತ್ತು ಉಳಿಸುವಿಕೆಗಳು.-** (1) ಈ ಮುಂದಿನ ಅಧಿನಿಯಮಿತಿಗಳನ್ನು ಎಂದರೆ,-

ಎ) ಧಾರ್ಮಿಕ ದತ್ತಿಗಳ ಅಧಿನಿಯಮ, 1863 (1863ರ ಕೇಂದ್ರ ಅಧಿನಿಯಮ ಸಂಖ್ಯೆ XX)

ಬಿ) ಧರ್ಮಾದಾಯ ದತ್ತಿಗಳ ಅಧಿನಿಯಮ, 1890 (1890ರ ಕೇಂದ್ರ ಅಧಿನಿಯಮ ಸಂಖ್ಯೆ VI)

ಸಿ) ಧರ್ಮಾದಾಯ ಮತ್ತು ಧಾರ್ಮಿಕ ನ್ಯಾಸಗಳ ಅಧಿನಿಯಮ, 1920 (1920 ಕೇಂದ್ರ ಅಧಿನಿಯಮ ಸಂಖ್ಯೆ XIV)

ಇವುಗಳು ಈ ಅಧಿನಿಯಮದ ಅಡಿಯಲ್ಲಿ ಬರುವ ಧರ್ಮಾದಾಯ ದತ್ತಿಗಳು ಮತ್ತು ಹಿಂದೂ ಧಾರ್ಮಿಕ,

- ಸಂಸ್ಥೆಗಳಿಗೆ ಅನ್ವಯವಾಗತಕ್ಕದ್ದಲ್ಲ.

2) ಈ ಮುಂದಿನ ಅಧಿನಿಯಮಗಳನ್ನು, ಎಂದರೆ.-

ಎ) ಬಾಂಬೆ ಸಾರ್ವಜನಿಕ ನ್ಯಾಸ ಅಧಿನಿಯಮ, 1950 (1950ರ ಬಾಂಬೆ ಅಧಿನಿಯಮ ಸಂಖ್ಯೆ XXIX);

ಬಿ) ಮದ್ರಾಸ್ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1951 (1951ರ ಮದ್ರಾಸ್ ಅಧಿನಿಯಮ ಸಂಖ್ಯೆ XIX)

ಸಿ) ಕೊಡಗು ದೇವಾಲಯ ನಿಧಿಗಳ ನಿರ್ವಹಣಾ ವಿನಿಯಮ 1892, (1892ರ ವಿನಿಯಮ IV)

ಡಿ) ಮೈಸೂರು ಧಾರ್ಮಿಕ ಮತ್ತು ಧರ್ಮಾದಾಯ ಸಂಸ್ಥೆಗಳ ಅಧಿನಿಯಮ, 1927 (1927ರ ಮೈಸೂರು ಅಧಿನಿಯಮ ಸಂಖ್ಯೆ VII)

ಇ) ಹೈದರಾಬಾದ್ ದತ್ತಿ ವಿನಿಯಮಗಳು, 1349 ಎಫ್;

ಎಫ್) ರೇಣುಕಾ ಎಲ್ಲಮ್ಮ ದೇವಸ್ಥಾನ (ಆಡಳಿತ) ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ 34); ಮತ್ತು

ಜಿ) ಕೊಡಗು ದೇವಸ್ಥಾನಗಳ ನಿಧಿಗಳ ನಿರ್ವವಹಣಾ ಅಧಿನಿಯಮ, 1956 (1956ರ ಕೊಡಗು ಅಧಿನಿಯಮ ಸಂಖ್ಯೆ VII)

- ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ III) 6ನೇ ಪ್ರಕರಣವು, ಸದರಿ ಅಧಿನಿಯಮಗಳ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು, ಇವು ಸದರಿ ಅಧಿನಿಯಮಗಳು ನಿರಸನವಾಗಿದ್ದರೆ ಮತ್ತು ಈ ಅಧಿನಿಯಮದಿಂದ ಪುನಃ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

XX XX XX

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 600, 12ನೇ ಡಿಸೆಂಬರ್ 2023

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SECOND SESSION**

# THE KARNATAKA HINDU RELIGIOUS INSTITUTIONS AND CHARITABLE ENDOWMENTS (AMENDMENT) BILL, 2023

**(LA Bill No. 32 of 2023)**

A Bill further to amend the Karnataka Hindu Religious Institutions and Charitable Endowments Act, 1997.

Whereas it is expedient further to amend the Karnataka Hindu Religious Institutions and Charitable Endowments Act, 1997 (Karnataka Act 33 of 2001) for the purposes hereinafter appearing;

Be it enacted by the Karnataka State Legislature in the seventy fourth year of the Republic of India as follows:-

**1. Short title and commencement.-** (1) This Act may be called the Karnataka Hindu Religious Institutions and Charitable Endowments (Amendment) Act, 2023.

(2) It shall be deemed to have come into force with effect from 1st day of May, 2003.

**2. Amendment of section 78.-** In the Karnataka Hindu Religious Institutions and Charitable Endowments Act, 1997 (Karnataka Act 33 of 2001) in section 78,-

(i) in sub-section (1) after clause (c), the following shall be inserted namely:-

"(d) The Bombay Public Trust Act, 1950 (Bombay Act No. XXIX of 1950);" and

(ii) in sub-section (2) clause (a), shall be omitted.

## STATEMENT OF OBJECTS AND REASONS

It is considered necessary further to amend the Karnataka Hindu Religious Institutions and Charitable Endowments Act, 1997 (Karnataka Act 33 of 2001), to revive the provisions of the Bombay Public Trust Act, 1950 (Bombay Act No. XXIX of 1950) in its application to public trusts.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**Ramalinga Reddy**
Minister for Transport and Muzrai

**M.K. Vishalakshi**
Secretary
Karnataka Legislative Assembly

## ANNEXURE

### EXTRACT FROM THE HINDU RELIGIOUS INSTITUTIONS AND CHARITABLE ENDOWMENTS ACT, 1997

### (KARNATAKA ACT NO.33 OF 2001)

**XXX XXX XXX**

**78. Repeal and Savings.-** (1) The following enactments, namely:-

(a) The Religious Endowments Act, 1863 (Central Act XX of 1863);

(b) The Charitable Endowments Act, 1890 (Central Act VI of 1890);

(c) The Charitable and Religious Trusts Act, 1920 (Central Act No. XIV of 1920);

shall not apply to the Charitable Endowments and Hindu Religious Institutions governed under this Act.

(2) The following enactments namely:-

(a) The Bombay Public Trust Act, 1950 (Bombay Act No. XXIX of 1950);

(b) The Madras Hindu Religious and Charitable Endowments Act, 1951 (Madras Act XIX of 1951);

(c) The Coorg Temple Funds Management Regulation, 1892 (Regulation IV of 1892).

(d) the Mysore Religious and Charitable Institutions Act, 1927 (Mysore Act VII of 1927);

(e) the Hyderabad Endowment Regulations, 1349F;

(f) The Renuka Yellamma Devasthana (Administration) Act, 1974 (Karnataka Act 34 of 1974);

(g) The Coorg Temples Fund Management Act, 1956 (Coorg Act VIII of 1956).

are hereby repealed;

Provided that section 6 of the Karnataka General Clauses Act, 1899 (Karnataka Act III of 1899) shall be applicable in respect of the repeal of the said enactment and section 8 and section 24 of the said Act shall be applicable as if the said enactments are repealed and re-enacted by this Act.

XXX XXX XXX

Govt. Press, Suvarna Vidhana Soudha, Belgavi, 12TH Dec, 2023, P7, W.D. , Copies 600